# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **789** |
| ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16-12-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬಹಳ ವರ್ಷಗಳ ಹಿಂದೆ ಅಳವಡಿಸಲಾದ ವಿದ್ಯುತ್ ಕಂಬಗಳು ತುಕ್ಕು ಹಿಡಿದು ಬೀಳುತ್ತಿದ್ದು, ಅನೇಕ ಅವಘಡಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸದರಿ ಕಂಬಗಳನ್ನು ಸ್ಥಳಾಂತರಿಸದಿರಲು ಕಾರಣಗಳೇನು; | ಬೆಂಗಳೂರು ನಗರದ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಶಿಥಿಲಗೊಂಡಿರುವ ಕಂಬಗಳನ್ನು ಕಾಲ ಕಾಲಕ್ಕೆ ಬದಲಾಯಿಸಲಾಗಿರುತ್ತದೆ.<br>ಮುಂದುವರೆದು, ಬೆಂಗಳೂರು ನಗರದ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಶಿಥಿಲಗೊಂಡಿರುವ/ತುಕ್ಕು ಹಿಡಿದಿರುವ ಕಂಬಗಳಿಂದ ಯಾವುದೇ ಅವಘಡಗಳು ಸಂಭವಿಸಿರುವುದಿಲ್ಲ. |
| ಆ) | ಬೆಂಗಳೂರು ನಗರದ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿನ ಯಶವಂತಪುರ ಹೋಬಳಿಯ ಮಲ್ಲಸಂದ್ರ ಮುಖ್ಯರಸ್ತೆಯ 05ನೇ ಅಡ್ಡರಸ್ತೆಯ ಅರುಣೋದಯ ಆಸ್ಪತ್ರೆಯಿಂದ ಮನೆ ಸಂಖ್ಯೆ 09 ರವರೆಗೆ ಅವೈಜ್ಞಾನಿಕವಾಗಿ ಅಳವಡಿಸಲಾದ ವಿದ್ಯುತ್ ಕಂಬಗಳನ್ನು ಮನೆಗಳ ಬಾಗಿಲುಗಳ ಮುಂದೆಯೇ ಅಳವಡಿಕೆ ಮಾಡಿದ್ದು, ಇವುಗಳನ್ನು ಸ್ಥಳಾಂತರಿಸಿ ಹೊಸ ಕಂಬಗಳನ್ನು ಅಳವಡಿಸಲು ತೆಗೆದುಕೊಂಡಿರುವ ಕ್ರಮಗಳೇನು; | ಬೆಂಗಳೂರು ನಗರದ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿನ ಯಶವಂತಪುರ ಹೋಬಳಿಯ ಮಲ್ಲಸಂದ್ರ ಮುಖ್ಯರಸ್ತೆಯ 05ನೇ ಅಡ್ಡ ರಸ್ತೆಯ ಅರುಣೋದಯ ಆಸ್ಪತ್ರೆಯಿಂದ ಮನೆ ಸಂಖ್ಯೆ.09 ರವರೆಗೆ 4 ಕಂಬಗಳನ್ನು (9 ಮೀಟರ್ ಕಂಬ-, 2 ಸಂಖ್ಯೆ ಮತ್ತು 8 ಮೀಟರ್ ಕಂಬ-2 ಸಂಖ್ಯೆ) ಕಟ್ಟಡಗಳ ನಿರ್ಮಾಣಕ್ಕಿಂತ ಮೊದಲೇ ಅಳವಡಿಸಲಾಗಿರುತ್ತದೆ.<br>ಮೇಲ್ಕಂಡ ಯಾವುದೇ ವಿದ್ಯುತ್ ಕಂಬಗಳು ಕಟ್ಟಡದ ಪ್ರವೇಶ ದ್ವಾರದಲ್ಲಿ ಕಂಡುಬಂದಿಲ್ಲ.<br>ಸದರಿ ಕಂಬಗಳಿಂದ ಕಟ್ಟಡದ ನಿವಾಸಿಗಳಿಗೆ ಮತ್ತು ಪಾದಚಾರಿಗಳ ದೈನಂದಿನ ಚಟುವಟಿಕೆಗಳಿಗೆ ಯಾವುದೇ ತೊಂದರೆ ಇರುವುದಿಲ್ಲ.<br>ಆದಾಗ್ಯೂ ವಿದ್ಯುತ್ ಕಂಬವನ್ನು ಸ್ಥಳಾಂತರಿಸಲು ಇಚ್ಛಿಸುವ ಅರ್ಜಿದಾರರು ಸ್ವಯಂ ಕಾರ್ಯನಿರ್ವಹಣೆ ಅಡಿಯಲ್ಲಿ ಕೈಗೊಳ್ಳಬಹುದಾಗಿರುತ್ತದೆ. ಈ ಸಮಸ್ಯೆಗೆ ಸಂಬಂಧಿಸಿದಂತೆ ಯಾವುದೇ ಅರ್ಜಿಗಳು /ಮನವಿ ಪತ್ರಗಳು /ಕುಂದು ಕೊರತೆಗಳು ಬೆ.ವಿ.ಕಂಪನಿ ಕಚೇರಿಯಲ್ಲಿ ದಾಖಲಾಗಿರುವುದಿಲ್ಲ. |

| | | |
|---|---|---|
| ಇ) | ಅವೈಜ್ಞಾನಿಕವಾಗಿ ಮನೆ ಸಂಖ್ಯೆ 9ರ ಮನೆ ಬಾಗಿಲು ಮುಂದೆ ಅಳವಡಿಸಲಾದ ಶಿಥಿಲಾವಸ್ಥೆಯಲ್ಲಿರುವ ವಿದ್ಯುತ್ ಕಂಬಕ್ಕೆ ಬೇರೊಂದು ಕಂಬವನ್ನು ಆಸರೆಯಾಗಿ ಅಳವಡಿಸಿದ್ದು, ಒಂದು ವೇಳೆ ಅವಘಡ ಸಂಭವಿಸಿದ್ದಲ್ಲಿ ಇದಕ್ಕೆ ಯಾವ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು; | ಮನೆ ಸಂಖ್ಯೆ: 9ರ ಮನೆಬಾಗಿಲು ಮುಂದೆ ಅವೈಜ್ಞಾನಿಕವಾಗಿ ವಿದ್ಯುತ್ ಕಂಬವನ್ನು ಅಳವಡಿಸಿರುವುದಿಲ್ಲ, ಸದರಿ ನಿವೇಶನದ ಮುಂಭಾಗದಲ್ಲಿ ಕಟ್ಟಡ ನಿರ್ಮಾಣಕ್ಕಿಂತ ಮೊದಲೇ ಅಳವಡಿಸಲಾಗಿದೆ. ಸದರಿ ಕಂಬವು ವಿದ್ಯುತ್ ಜಾಲದ ಕೊನೆಯ ಕಂಬವಾಗಿರುವುದರಿಂದ, ಆಸರೆಯಾಗಿ ಮತ್ತು ಸುರಕ್ಷತಾ ದೃಷ್ಟಿಯಿಂದ (Strut Pole) ಸ್ಟ್ರಟ್ ಪೋಲ್ ನಿಲ್ಲಿಸಲಾಗಿದೆ. ಇದರಿಂದ ಯಾವುದೇ ರೀತಿಯ ಅಪಾಯ ಸಂಭವಿಸುವ ಸಾಧ್ಯತೆ ಇರುವುದಿಲ್ಲ. 5ನೇ ಅಡ್ಡರಸ್ತೆಯಲ್ಲಿನ ವಿದ್ಯುತ್ ಕಂಬಗಳು ಸುಸ್ಥಿತಿಯಲ್ಲಿರುವುದರಿಂದ ಸ್ಥಳಾಂತರಿಸುವ ಅವಶ್ಯಕತೆ ಇರುವುದಿಲ್ಲ. |
| ಈ) | ಈ 5ನೇ ಅಡ್ಡರಸ್ತೆಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಂಬಗಳನ್ನು ಯಾವ ಕಾಲಮಿತಿಯಲ್ಲಿ ಸ್ಥಳಾಂತರಿಸಿ ಹೊಸ ವಿದ್ಯುತ್ ಕಂಬಗಳನ್ನು ಅಳವಡಿಸಲಾಗುವುದು? (ಸಂಪೂರ್ಣ ವಿವರ ನೀಡುವುದು) | |

ಸಂಖ್ಯೆ: ಎನರ್ಜಿ 351 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು